ಅಧ್ಯಕ್ಷರು.—ಅದನ್ನು ನಿನ್ನೆ ಇಟ್ಟರಲ್ಲ.

ಶ್ರೀ ಸಿ. ಬೈರೇಗೌಡ.—ನಮಗೆ ಅದರ ಪ್ರತಿಗಳು ಬಂದಿಲ್ಲ. ಆದರೆ ವರದಿ ಬಗ್ಗೆ ಈಗಾಗಲೇ ಪ್ರತಿಕೆಗಳಲ್ಲಿ ವಿಕೃತ ವರದಿಗಳೇ ಬರುತ್ತಾ ಇವೆ. ನಮ್ಮ ಕೈಗೆ ಇನ್ನೂ ವರದಿ ಸೇರೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ನವರಿಗೂ ಕೂಡ ವರದಿ ಕೈ ಸೇರಿಲ್ಲ. ಯಾವಾಗ ಅವು ನಮ್ಮ ಕೈ ಸೇರುತ್ತವೆ ? ಯಾವಾಗ ಆ ವರದಿಯನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಿ ?

ಶ್ರೀ ಸಿ. ಬೈರೇಗೌಡ.—ನಾವು ಅದರ ಬಗ್ಗೆ ಏನು ಹೇಳಬೇಕೆಂದೇ ನಮಗೆ ಗೊತ್ತಾಗುತ್ತಾ ಇಲ್ಲ.

ಅಧ್ಯಕ್ಷರು.—ನಿನ್ನೆ ಉಪಾಧ್ಯಕ್ಷರು ಆ ವರದಿಯನ್ನು ಮಂಡಿಸಿದ್ದಾರೆ. ಅದನ್ನು ಸಭೆಯಲ್ಲಿ ಮಂಡಿಸಲಾಗಿದೆ. ಅದರ ಪ್ರತಿಗಳನ್ನು ನೋಟೀಸ್ ಆಫೀಸಿನಲ್ಲಿ ಮಾನ್ಯ ಸದಸ್ಯರು ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದು ನೋಟೀಸ್ ಆಫೀಸಿನಲ್ಲಿದೆ. ತಾವು ಅಲ್ಲಿ ಪಡೆದುಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ.—ಆಗಬಹುದು ಧನ್ಯವಾದಗಳು.

ಗಮನ ಸೆಳೆಯುವ ಸೂಚನೆ

1 ಬೆಂಗಳೂರು ವಿಶ್ವವಿದ್ಯಾನಿಲಯದ ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರ

† **ಶ್ರೀ ಪಿ. ಜಿ. ಆರ್. ಸಿಂಧ್ಯ.**—ಬೆಂಗಳೂರು ವಿಶ್ವವಿದ್ಯಾನಿಲಯದ ವೈದ್ಯಕೀಯ ವಿದ್ಯಾರ್ಥಿಗಳು ಮುಷ್ಕರ ಹೂಡಿರುವುದರ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾಲಯವು ಕ್ಲಿನಿಕಲ್ ಬೋರ್ಡ್ ಆಫ್ ಸ್ಟಡೀಸ್‌ನ ಸಭೆಯನ್ನು ಈಗಾಗಲೇ ಕರೆದಿದ್ದು ಸಭೆಯು ಶೀಘ್ರದಲ್ಲಿಯೇ ಸೇರಲಿದೆ. ಕೊನೆಯ ವರ್ಷದ ಎಂ.ಬಿ.ಬಿ.ಎಸ್. ಪರೀಕ್ಷೆಯ ಬಗ್ಗೆ ವಿದ್ಯಾರ್ಥಿಗಳು ಈಗ ನಡೆಸುತ್ತಿರುವ ಮುಷ್ಕರ ಹೂಡಿರುವ ಹಿನ್ನೆಲೆಯಲ್ಲಿ ಈ ಸಭೆಯನ್ನು ಕರೆಯಲಾಗಿದ್ದು ಎಂ.ಬಿ.ಬಿ.ಎಸ್. ತರಗತಿಗೆ ಸಂಬಂಧಿಸಿರುವ ಈಗಿರುವ ನಿಯಮಾವಳಿಗಳನ್ನು ಚರ್ಚಿಸುವುದೇ ಈ ಸಭೆಯ ಉದ್ದೇಶವಾಗಿದೆ. ಬೋರ್ಡ್ ಆಫ್ ಸ್ಟಡೀಸ್ ರವರ ಸಭೆಯು ಶಿಫಾರಸ್ಸುಗಳನ್ನು ಪರಿಶೀಲಿಸಿ, ವಿಶ್ವವಿದ್ಯಾಲಯಕ್ಕೆ ತನ್ನ ನಿರ್ಣಯವನ್ನು ಕಳುಹಿಸಿಕೊಡಲು ಅನುಕೂಲವಾಗುವಂತೆ ವೈದ್ಯಕೀಯ ಫ್ಯಾಕಲ್ಟಿಯವರು ಸಭೆಯನ್ನು ಸಹ ಕರೆಯಲು ವ್ಯವಸ್ಥೆಯಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಇಲ್ಲಿ ಮುಖ್ಯವಾಗಿರತಕ್ಕದ್ದು ಎಕ್ಸಾಮಿನೇಷನ್ ಫೀ ಕಟ್ಟಲಿಕ್ಕೆ ಲಾಸ್ಟ್ ಡೇಟ್ ಈಗಾಗಲೇ ಆಗಿದೆ. ಫೀಯನ್ನು ಸಹ ಕಟ್ಟಿಸಿಕೊಂಡಿದ್ದಾರೆ. ವೈದ್ಯಕೀಯ ವಿದ್ಯಾರ್ಥಿಗಳು ಕಳೆದ ೮-೧೦ ದಿವಸಗಳಿಂದ ಮುಷ್ಕರ ಮಾಡುತ್ತಿದ್ದಾರೆ ನನಗನಿಸುತ್ತದೆ, ಮಾನ್ಯ ಆರೋಗ್ಯ ಸಚಿವೆಯವರು ಮತ್ತು ಶಿಕ್ಷಣ ಸಚಿವರು ಅವರ ಪ್ರತಿನಿಧಿಗಳನ್ನು ಮತ್ತು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಕರೆಸಿ ಒಂದು ಅರ್ಧ ಗಂಟೆ ಚರ್ಚೆ ಮಾಡಿದ್ದರೆ. ಆ ವಿದ್ಯಾರ್ಥಿಗಳು ಬೀದಿಯಲ್ಲಿ ಹೋಗದ ಹಾಗೆ ಮಾಡಬಹುದಾಗಿತ್ತು. ಈಗಲೂ ಈ ರೀತಿ ಮಾಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಮುಷ್ಕರ ಮಾಡುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಏಕೆಂದರೆ ಈ ಜೂನಿಯರ್ ಡಾಕ್ಟರ್‌ಗಳು ಸರ್ಕಾರಕ್ಕೆ ಒಂದು ನೋಟೀಸ್ ಕೊಟ್ಟಿದ್ದಾರೆ ಅವರ ಮುಷ್ಕರಕ್ಕೆ ನಾವು ಬೆಂಬಲ ಕೊಟ್ಟಿದ್ದೇವೆಂದೂ ೧೮ನೇ ತಾರೀಖಿನಿಂದ ಮುಷ್ಕರ ಮಾಡುತ್ತೇವೆಂದು ಹೇಳಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ, ನಿಮಾನ್ಸ್ ಆಸ್ಪತ್ರೆಗಳಲ್ಲಿ ಕೆಲಸ ಮಾಡತಕ್ಕ ಜೂನಿಯರ್ ಡಾಕ್ಟರ್‌ಗಳು ಮುಷ್ಕರದಲ್ಲಿ ಪಾಲ್ಗೊಂಡರೆ ಅಲ್ಲಿನ ಕೆಲಸಕಾರ್ಯಗಳು ಸ್ಥಗಿತವಾಗಿ ಜನರಿಗೆ ಬಹಳ ತೊಂದರೆಯಾಗುತ್ತದೆ. ಇದು ಅಂತಹ ದೊಡ್ಡ ಮಹತ್ವ ವಿಚಾರವೆಂದು ನಾನು ತಿಳಿದುಕೊಂಡಿಲ್ಲ. ಜೊತೆಗೆ ಸರ್ಕಾರ ಇದನ್ನು ಪ್ರತಿಷ್ಠೆ ಪ್ರಶ್ನೆಯಾಗಿ ಮಾಡಿಕೊಳ್ಳುವ ಅಗತ್ಯವಿಲ್ಲ. ಅವರುಗಳೆಲ್ಲ ಪ್ರೊಫೆಷನಲ್ ವಿದ್ಯಾರ್ಥಿಗಳಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಸಭೆಯಲ್ಲಿಲ್ಲ. ಅವರು ಮತ್ತು ಆರೋಗ್ಯ ಸಚಿವರು ಕುಳಿತುಕೊಂಡು ಇದರ ಬಗ್ಗೆ ಚರ್ಚೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದರೆ ಅರ್ಧಗಂಟೆಯಲ್ಲಿ ಸಮಸ್ಯೆಯನ್ನು ಬಗೆಹರಿಸಬಹುದೆಂದು ನನ್ನ ಅಭಿಪ್ರಾಯ. ಈ ನಿಯಮಗಳನ್ನು ಯಾವಾಗ ರಚನೆ ಮಾಡಿದ್ದು ? ವಿದ್ಯಾರ್ಥಿಗಳು ಸೇರುವುದಕ್ಕೆ ಮುಂಚೆ ಹೇಳಬಹುದಾಗಿತ್ತು. ಎಕ್ಸಾಮಿನೇಷನ್ ಫೀ ಕಟ್ಟಿದ ಮೇಲೆ ಈಗ ಆದನ್ನು ಚೇಂಜ್ ಮಾಡುತ್ತೇವೆಂದರೆ ನನಗೆ ಅರ್ಥವಾಗುವುದಿಲ್ಲ. ಉಪಕುಲಪತಿಗಳ ಬಗ್ಗೆ ಯಾವುದೇ ರೀತಿಯ ದೂರು ಹೇಳಬೇಕೆಂದು ಇದನ್ನೆಲ್ಲಾ ಹೇಳುತ್ತಿಲ್ಲ. ಇದು ಅನಾವಶ್ಯಕವಾಗಿ ಸರ್ಕಾರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವ ಸಂದರ್ಭದಲ್ಲಿ ಗೊಂದಲ ಉಂಟು ಮಾಡುವುದು ಸರಿಯಲ್ಲವೆಂದು ಸಭೆಯ ಮೂಲಕ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ. ವಿಲ್. ಮುಲಕರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೆ, ಇದೊಂದು ನ್ಯಾಯವಾದ ಪ್ರಶ್ನೆ. ಸನ್ಮಾನ್ಯ ಆರೋಗ್ಯ ಸಚಿವರು ಸ್ವಲ್ಪ ಸಹಾನುಭೂತಿಯಿಂದ ಆಲೋಚಿಸಬೇಕೆಂದು ತಮ್ಮ ಮಾಹಿತಿಗಾಗಿ ಕೇಳಿಕೊಳ್ಳುತ್ತೇನೆ ಈ ಪರೀಕ್ಷಾ ನಿಯಮಾವಳಿಗಳನ್ನು ರೂಪಿಸಿದ್ದು ೧೯೭೯ರಲ್ಲಿ. ಯಾವಾಗ ನಿಯಮಗಳಿದ್ದಾಗ ಅವು ಪರೀಕ್ಷೆಗೆ ಕೂಡಲಿಕ್ಕೆ ಅವಕಾಶ ಕೊಡುತ್ತಿಲ್ಲ. ನಿಯಮಗಳನ್ನು ರಚಿಸಿದ್ದು ೧೯೭೯ರಲ್ಲಿ, ನಿಯಮಗಳನ್ನು ಜಾರಿಗೆ ತಂದಿದ್ದು ೧೯೮೦ನೇ ಇಸವಿಯಲ್ಲಿ. ಒಂದು ವೇಳೆ ಆದನ್ನು ೧೯೭೯ರಲ್ಲೆ ಜಾರಿ ಮಾಡಿದ್ದರೆ ಹುಡುಗರಿಗೆ ಅನುಕೂಲವಾಗುವುದಕ್ಕೆ ಬದಲು ದೊಡ್ಡ ತೊಂದರೆಯಾಗುತ್ತಿತ್ತು. ಸುದೈವ ಅವನ್ನು ಜಾರಿ ಮಾಡಲಿಲ್ಲ. ಈಗ ಏಕೆ ಜಾರಿ ಮಾಡಿದ್ದಾರೆಂದರೆ, ಯಾವುದೋ ಕಾರಣಕ್ಕಾಗಿ ಸೆಕೆಂಡ್ ಎಂಬಿಬಿಎಸ್ ಪಾಸ್ ಆದ ವಿದ್ಯಾರ್ಥಿ ಕೋರ್ಟಿಗೆ ಹೋಗಿದ್ದು, ಕೋರ್ಟಿನವರು ಅಡ್ವಾಟಿಯವರಿಗೆ ಈ ವಿಚಾರವನ್ನು ಗಮನಕ್ಕೆ ತಂದಾಗ ಈಗ ಅವರು ಜಾರಿ ಮಾಡುತ್ತಿದ್ದಾರೆ. ಒಂದು ವೇಳೆ ಜಾರಿ ಮಾಡಿದರೂ ಇದು ಅನ್ಯಾಯ. ಕಾರಣ ಇಷ್ಟೆ, ನಿಯಮಗಳ ಹಿನ್ನೆಲೆಯನ್ನು ಹೇಳುತ್ತೇನೆ. ತಕ್ಷಣ ಈ ಕಾನೂನಿಗೆ ತಿದ್ದುಪಡಿ ತರಬೇಕಾಗಿದೆ. ಸಾಮಾನ್ಯವಾಗಿ ಹೊರಡಿಸಿ ಆದರೂ ಜಾರಿಗೆ ತರಬೇಕು ಸೆಮಿಸ್ಟಾರ್ ಸಿಸ್ಟಮ್ ನಲ್ಲಿ ಫಸ್ಟ್ ಎಂಬಿಬಿಎಸ್, ಸೆಕೆಂಡ್ ಎಂಬಿಬಿಎಸ್, ಥರ್ಡ್ ಎಂಬಿಬಿಎಸ್ ಎಂದು ಮೂರುಭಾಗ ಇದೆ ಪ್ರತಿಯೊಂದಕ್ಕೂ ಒಂದೂವರೆ ವರ್ಷ ಅವಧಿ ಇರುತ್ತದೆ ಈ ತರಾ ಮೂರು ಭಾಗ ಮಾಡಿಕೊಂಡಿರುತ್ತಾರೆ. ಆರು ತಿಂಗಳಿಗೊಂದು ಸೆಮಿಸ್ಟಾರ್ ಪರೀಕ್ಷೆ ಬರುತ್ತದೆ ಅಂದರೆ ಮೂರು ಟರ್ಮ್ ಎಂದು ಕರೆಯುತ್ತಾರೆ. ಫಸ್ಟ್ ಎಂಬಿಬಿಎಸ್ ಸಬ್ಜೆಕ್ಟ್ ಪಾಸ್ ಆದಮೇಲೆ ಸೆಕೆಂಡ್ ಎಂಬಿಬಿಎಸ್‌ಗೆ ಹೋಗುತ್ತಾರೆ. ಪಾಸ್ ಆಗದಿದ್ದರೆ ಸೆಕೆಂಡ್ ಎಂಬಿಬಿಎಸ್‌ಗೆ ಹೋಗುವುದಿಲ್ಲ. ಆದರೆ ಸೆಕೆಂಡ್ ಎಂಬಿಬಿಎಸ್‌ನಲ್ಲಿ ಎಲ್ಲಾ ಎಕ್ಸಾಮ್‌ಗಳು ಪಾಸ್ ಆಗದಿದ್ದರೂ ಮೂರನೇ ಎಂಬಿಬಿಎಸ್‌ಗೆ ಪ್ರವೇಶ ಸಿಗುತ್ತದೆ. ಅದನ್ನು ಕ್ಯಾರಿಓವರ್ ಸಿಸ್ಟಮ್ ಎಂದು ಕರೆಯುತ್ತಾರೆ ಸೆಕೆಂಡ್ ಎಂಬಿಬಿಎಸ್, ಥರ್ಡ್ ಎಂಬಿಬಿಎಸ್ ಸಬ್ಜೆಕ್ಟ್‌ಗಳು ಏನಿವೆ ಅವುಗಳನ್ನೆಲ್ಲ ಕೂಡೇ ಅಭ್ಯಾಸ ಮಾಡಿಸುತ್ತಾರೆ. ಸೆಕೆಂಡ್ ಎಂಬಿಬಿಎಸ್‌ನವರು ಒಂದೂವರೆ ವರ್ಷ ಆದಮೇಲೆ ಪರೀಕ್ಷೆ ತೆಗೆದುಕೊಳ್ಳುತ್ತಾರೆ. ಆದರೆ ಇಲ್ಲಿ ತೊಡಕು ಏನಾಗಿದೆ ಅಂದರೆ ಈ ಸೆಕೆಂಡ್ ಎಂಬಿಬಿಎಸ್‌ನ ಹುಡುಗರು ತಮ್ಮ ಸಬ್ಜೆಕ್ಟ್‌ಗಳನ್ನು ಸಂಪೂರ್ಣ ಪಾಸ್ ಮಾಡದಿದ್ದರೂ ಅವರಿಗೆ ಫೈನಲ್ ಎಂಬಿಬಿಎಸ್ ಪರೀಕ್ಷೆಗೆ ಪರ್ಮಿಷನ್ ಏಕಕ್ಕೆ ಕೊಡುತ್ತಾರೆಂದರೆ ಆರು ತಿಂಗಳ ಅಂತರದಲ್ಲಿ ಫೈನಲ್ ಎಂಬಿಬಿಎಸ್ ಸಬ್ಜೆಕ್ಟ್‌ಗಳನ್ನು ಪೂರ್ಣ ಮಾಡಲಿಕ್ಕೆ ಅವರಿಗೆ ಅನುಮತಿಯನ್ನು ಕೊಡುತ್ತಾರೆ.

ಈ ರೂಲ್ಸ್ ಪ್ರಕಾರ ಒಂದು ವರ್ಷ ಕಾಯಬೇಕಾಗುತ್ತದೆ. ಒಂದು ವರ್ಷ ಕಾಯಬೇಕಾದ ಅವಶ್ಯಕತೆ ಇಲ್ಲ. ಕ್ಯಾರಿಡ್ ಓವರ್ ಸಿಸ್ಟಮ್‌ನ ಅರ್ಥವೇ ಇದು ನಿಯಮ ಏನು ಹೇಳುತ್ತದೆ ಎಂದರೆ ಫೈನಲ್ ಎಂ.ಬಿ.ಬಿ.ಎಸ್‌ಗೆ ಅಪಿಯರ್ ಆಗಬೇಕಾದರೆ ಒಂದು ವರ್ಷ ಕಾಲಾವಧಿ ಬೇಕಾಗುತ್ತದೆ ಎಂದು ಹೇಳುತ್ತಾರೆ ಈಗ ಸೆಕೆಂಡ್ ಈಯರ್ ಎಂ.ಬಿ.ಬಿ.ಎಸ್.ನಲ್ಲಿ ಸಬ್ಜೆಕ್ಟ್‌ಗಳಲ್ಲಿ ಪಾಸ್ ಆದಮೇಲೆ ಥರ್ಡ್ ಈಯರ್ ಎಂ.ಬಿ.ಬಿ ಎಸ್.ನ್ನು ಕಂಪ್ಲೀಟ್ ಮಾಡಿರುತ್ತಾರೆ. ಇದಕ್ಕೆ ಅವರು ಒಂದು ವರ್ಷ ಕಾಯುವ ಅವಶ್ಯಕತೆ ಇಲ್ಲ. ಸೆಕೆಂಡ್ ಈಯರ್ ಎಂ.ಬಿ.ಬಿ.ಎಸ್.ನ ಎಲ್ಲಾ ಸಬ್ಜೆಕ್ಟ್‌ಗಳಲ್ಲಿ ಪಾಸ್ ಆದಮೇಲೆ ಆರು ತಿಂಗಳ ಅಂತರದಲ್ಲಿ ಫೈನಲ್ ಈಯರ್ ಎಂ.ಬಿ.ಬಿ ಎಸ್. ಪಾರ್ಟ್ ೧ ಪರೀಕ್ಷೆಗೆ ಪರ್ಮಿಶನ್ ಕೊಡಬೇಕು ಬೇರೆಯಾವ ಯೂನಿವರ್ಸಿಟಿಯಲ್ಲೂ ಈ ರೂಲ್ಸು ಇಲ್ಲ. I don't know who is that Professor or the Member of Faculty who framed this university rules.. ಮೈಸೂರು, ಕರ್ನಾಟಕ, ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿ ಈ ನಿಯಮ ಇಲ್ಲ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಮಾತ್ರ ಈ ರೀತಿ ಮಾಡಿದ್ದಾರೆ. ಇದನ್ನು ತಕ್ಷಣ ರದ್ದುಪಡಿಸಿ ಮಾಡಿಕ್ಕಳು ಆರು ತಿಂಗಳ ಕಾಲದಲ್ಲಿ ಸೆಕೆಂಡ್ ಈಯರ್ ಎಂ.ಬಿ.ಬಿ.ಎಸ್. ಪಾಸ್ ಆದಮೇಲೆ ಫೈನಲ್ ಈಯರ್‌ನ ಪಾರ್ಟ್ ೧ಗೆ ಕುಳಿತುಕೊಳ್ಳುವುದಕ್ಕೆ ಅನುಮತಿ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರಾದ ಶ್ರೀ ಸಿಂಧ್ಯಾ ರವರು ಹೇಳಿದ ಹಾಗೆ ವಿದ್ಯಾರ್ಥಿಗಳನ್ನು ನಾವು ಭೇಟಿ ಮಾಡಿದೇ ಇರಲಿಲ್ಲ. ಅವರು ನಮ್ಮ ಹತ್ತಿರ ಬಂದಿದ್ದರು ಮತ್ತು ಸುದೀರ್ಘವಾದ ಚರ್ಚೆ ನಡೆದಿತ್ತು. ನಾನು ಕೂಡ ಮೆಡಿಕಲ್ ಫ್ಯಾಕಲ್ಟಿಯ ಅಧಿಕಾರಿಗಳನ್ನೆಲ್ಲ ಕರೆಸಿಮಾತನಾಡಿದ್ದೇನೆ. ಆದೇರೀತಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಕೂಡ ಪತ್ರ ಬರೆದು ವಿದ್ಯಾರ್ಥಿಗಳಿಗೆ ಆದ ಅನ್ಯಾಯವನ್ನು ಸರಿಪಡಿಸಬೇಕೆಂದು ಕೇಳಿದ್ದೇವೆ. ಇನ್ನು ಎರಡು ಮೂರು ದಿನಗಳಲ್ಲಿ ಇದನ್ನು ಸರಿಪಡಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಹಾಗೆ ನಾವು ಏರ್ಪಾಡು ಮಾಡುತ್ತೇವೆ.

ನಾಗರಹೊಳೆ ಅರಣ್ಯದಲ್ಲಿ ಐದು ಹುಲಿಗಳನ್ನು ಕೊಂದಿರುವ ಬಗ್ಗೆ

† **ಶ್ರೀಮತಿ ಚಂದ್ರಪ್ರಭಾ ಅರಸ್**.—ನಾಗರಹೊಳೆ ಅರಣ್ಯದಲ್ಲಿ ಐದು ಹುಲಿಗಳನ್ನು ಕೊಂದಿರುವ ಬಗ್ಗೆ ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಸಚಿವರು),—ಮಾನ್ಯ ಅಧ್ಯಕ್ಷರೇ, ನಾಗರಹೊಳೆ ಅಭಯಾರಣ್ಯದಲ್ಲಿ ದಿನಾಂಕ ೬-೩-೯೦ ರಿಂದ ೪-೫-೯೦ರಲ್ಲಿ ಐದು ಹುಲಿಗಳು ಸತ್ತು ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಮೇಲಿನ ಐದು ಹುಲಿಗಳ ಪೈಕಿ ಒಂದು ಹುಲಿಯು ದಿನಾಂಕ ೨೨-೩-೯೦ರಂದು ಸಂತಾಪುರದಲ್ಲಿ ಸಂಶೋಧನೆ ಯೋಜನೆಯಡಿ ಎಲಿಕ್ಟ್ರಾನಿಕ್ ಕಾಲರ್ ಹಾಕಲಾಗಿದ್ದು, ಸತ್ತಿರುತ್ತದೆ. ಉಳಿದ ನಾಲ್ಕು ಹುಲಿಗಳು ಮೇಲಿನ ಯೋಜನೆಯ ಕಾರ್ಯಕ್ರಮದಡಿ ಹಿಡಿದಿರುವುದಲ್ಲ. ಈ ಹುಲಿಗಳು ಸತ್ತಿರುವುದು ಸಾರ್ವಜನಿಕರ ಮನಸ್ಸಿನಲ್ಲಿ ಸಂಶಯವನ್ನು ಉಂಟು ಮಾಡಿರುವುದರಿಂದ ಈ ಕೂಡಲೇ ರೇಡಿಯೋ ಕಾಲರಿಂಗ್ ಮಾಡಿಸುವುದನ್ನು ನಿಲ್ಲಿಸಲಾಗಿರುವುದು. ಇದಲ್ಲದೆ ಈ ಹುಲಿಗಳ ಸಾವಿಗೆ ಕಾರಣವನ್ನು ಸಮರ್ಥ ತಜ್ಞರ ಕಡೆಯಿಂದ ತನಿಖೆ ಮಾಡಿಸಿ, ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ, ನಾಗರಹೊಳೆ ಕೇವಲ ಕೆಲವು ಮಿಟರ್‌ಗಳ ಅಂತರದಲ್ಲಿ ನಮ್ಮ ತಾಲ್ಲೂಕು ಕ್ಷೇತ್ರದ ಸನಿಹದಲ್ಲಿ ಬರತಕ್ಕಂಥ ಬಹಳ ಸುಂದರವಾದ, ಪ್ರಕೃತಿದತ್ತವಾದ ಅರಣ್ಯವಾಗಿದೆ. ಅಲ್ಲಿ ಹುಲಿಗಳನ್ನು ಸಂರಕ್ಷಿತ ಪ್ರಾಣಿಯೆಂದು ಪರಿಗಣಿಸಿ ಟೈಗರ್ ಪ್ರಾಜೆಕ್ಟ್ ಅಂತ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲದೆ ವಿಶಾಲವಾದ ಬಹಳ ಸುಂದರವಾದ ಈ ಪ್ರಾಣಿಗಳನ್ನು, ಅಲ್ಲಿ ಸಂರಕ್ಷಿಸಿ ಅವುಗಳ ಸಂತತಿ ಬೆಳೆಯಬೇಕೆನ್ನುವ ಕಾರಣದಿಂದ ಈ ಕಾಡುಪ್ರದೇಶದಲ್ಲಿ ಅವುಗಳಿಗೆ ಎಲ್ಲ ರೀತಿಯ ರಕ್ಷಣೆಯನ್ನು ಒದಗಿಸಿಕೊಟ್ಟಿದ್ದು ಅವುಗಳ ಸಂಖ್ಯೆ ಇತ್ತೀಚೆಗೆ ೧೧-೧೨ರ ಮೇಲಿದೆಯೆಂದು ತಿಳಿದುಬಂದಿದೆ. ನಾವು ಪ್ರಕೃತಿ ಪ್ರೇಮಿಗಳಾಗಿರುವುದರಿಂದ ಆಗಾಗ ವರ್ಷಕ್ಕೊಮ್ಮೆಯಾದರೂ ಅಲ್ಲಿ ಹೋಗಿಬರುವ ಪರಿಪಾಠವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಕೇವಲ ೨ ತಿಂಗಳಲ್ಲಿ ಅಂದರೆ ೬-೩-೯೦ ರಿಂದ ೪-೫-೯೦ರ ಅವಧಿಯಲ್ಲಿ ಐದು ಹುಲಿಗಳು ಸತ್ತುಹೋಗಿರುವ ವರದಿ ಬಂದಿದೆಯೆಂದು ಹೇಳುತ್ತಾರೆ.

ಮತ್ತು ತನಿಖೆಯನ್ನು ಮುಂದುವರಿಸಿದ್ದೇವೆಂದು ಹೇಳುತ್ತಿದ್ದಾರೆ. ಅಲ್ಲಿ ಆ ಹುಲಿಗಳು ಸತ್ತ ಕಾರಣ ಏನು, ಈ ಸಾವಿಗೆ ಕಾರಣರು ಯಾರಾದರೂ ಎನ್ನುವುದು ಇವತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿ ಬಂದಿದೆ. ಶ್ರೀಮಾನ್ ಉಲ್ಲಾಸ್ ಕಾರಂತ್ ಅವರ ಮೂಲಕ, ರಾಜ್ಯ ಸರ್ಕಾರ ವಂಶ್ರು ಕೇಂದ್ರ ಸರ್ಕಾರದ ವತಿಯಿಂದ ಯೋಜನೆಯೊಂದನ್ನು ನಡೆಸಿದ್ದಾರೆ. ಅದರ ಮೇಲೆ ಪ್ರಯೋಗ ಮಾಡತಕ್ಕ ಒಂದು ಯೋಜನೆ. ಎಲೆಕ್ಟ್ರಾನಿಕ್ ಡಿವೈಸಸ್ ಅನ್ನು ಆದರ ಕೊರಳಪಟ್ಟಿಗೆ ಅಳವಡಿಸಿ, ಅದರ ಚಲನವಲನಗಳ ಮೇಲೆ ಒಂದು ಸಂಶೋಧನೆಯನ್ನು ನಡೆಸುತ್ತಿದ್ದೇವೆಂದೂ ಹೇಳಿರತಕ್ಕಂಥ ಪ್ರಯೋಗ. ಈ ಪ್ರಯೋಗ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಪರಿಸರದಲ್ಲಿ ಮತ್ತು ಇಲ್ಲಿನ ವಾತಾವರಣದಲ್ಲಿ ಹುಲಿಗಳ ಮೇಲೆ ಆಗತಕ್ಕ ಪರಿಣಾಮ ಏನು ಎನ್ನುವುದರ ಬಗ್ಗೆ ಅವರು ಗಮನ ಹರಿಸಿದ್ದಾರೆಯೇ ಅಥವಾ ಸಂಬಂಧಪಟ್ಟ ವೈದ್ಯರುಗಳು ಮಾಹಿತಿ ಕೊಟ್ಟಿದ್ದಾರೆಯೋ ಇಲ್ಲವೋ ಗೊತ್ತಾಗಿ ಬಂದಿಲ್ಲ. ಮತ್ತು ಸತ್ತ ಹುಲಿಗಳನ್ನು ವೈಜ್ಞಾನಿಕ ಹಾಗೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಂಥ ರಿಪೋರ್ಟ್‌ನ ವಿವರಣೆ ಇದರಲ್ಲಿ ಇಲ್ಲ. ನನಗೆ ತಿಳಿದಮಟ್ಟಿಗೆ, ಸುಮಾರು ಏಪ್ರಿಲ್ ತಿಂಗಳಲ್ಲಿ ಅಲ್ಲಿ ಒಂದು ದಿನ ತಂಗಿದ್ದ ಸಮಯದಲ್ಲಿ, ಒಂದು ಹುಲಿಗೆ ಪ್ರಾಣಾಪಾಯ ಇತ್ತು. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ, ನಾವು ಅದನ್ನು ನೋಡುವುದಕ್ಕೆ ಅಪೇಕ್ಷೆ ಪಟ್ಟಾಗ,